**A**

**CCE RR/PR/PF/ NSR/NSPR**
**FULL SYLLABUS**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಆಗಸ್ಟ್ 2024 ರ ಪರೀಕ್ಷೆ - 3**

**AUGUST 2024 EXAMINATION - 3**

# ಮಾದರಿ ಉತ್ತರಗಳು

# MODEL ANSWERS

**ಸಂಕೇತ ಸಂಖ್ಯೆ : 33-K** **CODE NO. : 33-K**

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

**ದಿನಾಂಕ : 07. 08. 2024 ]** **[ ಗರಿಷ್ಠ ಅಂಕಗಳು : 80**

**Date : 07. 08. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **I.** | ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : | **4 × 1 = 4** |
| 1. | ಆದೇಶ ಸಂಧಿಗೆ ಉದಾಹರಣೆಯಾಗಿರುವ ಪದ<br>(ಎ) ಬೇರೊಬ್ಬ (ಬಿ) ಮಳೆಗಾಲ<br>(ಸಿ) ಗುರುವನ್ನು (ಡಿ) ಶಾಲೆಯಿಂದ<br>***ಉತ್ತರ :*** (ಬಿ) ಮಳೆಗಾಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಸಪ್ತಮಿ ವಿಭಕ್ತಿ ಪ್ರತ್ಯಯವಿದು<br>(ಎ) ಅ (ಬಿ) ಗೆ<br>(ಸಿ) ಇಂದ (ಡಿ) ಅಲ್ಲಿ<br>***ಉತ್ತರ :*** (ಡಿ) ಅಲ್ಲಿ | |
| 3. | ಅಂಕಿತನಾಮಕ್ಕೆ ಉದಾಹರಣೆಯಾಗಿರುವ ಪದ<br>(ಎ) ಬೆಂಗಳೂರು (ಬಿ) ವಿಜ್ಞಾನಿ<br>(ಸಿ) ಹುಡುಗಿ (ಡಿ) ಸಮುದ್ರ<br>***ಉತ್ತರ :*** (ಎ) ಬೆಂಗಳೂರು | |
| 4. | ಇವುಗಳಲ್ಲಿ ವರ್ತಮಾನಕಾಲವನ್ನು ಸೂಚಿಸುವ ಪದ<br>(ಎ) ನೋಡುವನು (ಬಿ) ನೋಡಿದನು<br>(ಸಿ) ನೋಡುತ್ತಾನೆ (ಡಿ) ನೋಡಿತು<br>***ಉತ್ತರ :*** (ಸಿ) ನೋಡುತ್ತಾನೆ | |
| **II.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **12 × 1 = 12** |
| 5. | ವಿಷದ ಬಾಣವು ಮರಕ್ಕೆ ಏಕೆ ತಗುಲಿತು ?<br>***ಉತ್ತರ :***<br>ಜಿಂಕೆ ಹಾರಿ ತಪ್ಪಿಸಿಕೊಂಡಿದ್ದರಿಂದ ವಿಷದ ಬಾಣವು ಮರಕ್ಕೆ ತಗುಲಿತು. | |
| 6. | ಪುಟ್ಟರಾಜರ ತಂದೆ ತಾಯಿಗಳ ಹೆಸರೇನು ?<br>***ಉತ್ತರ :***<br>ಪುಟ್ಟರಾಜರ ತಂದೆ ಹೆಸರು ರೇವಣ್ಣಯ್ಯ ಮತ್ತು ತಾಯಿಯ ಹೆಸರು ಸಿದ್ಧಮ್ಮ. | |
| 7. | ಸಸ್ತನಿಗಳ ಆಶ್ರಯದಾಣಗಳು ಯಾವುವು ?<br>***ಉತ್ತರ :***<br>ಗುಹೆ, ಪೊಟರೆ, ಗೂಡು ಮತ್ತು ಬಿಲ – ಇವು ಸಸ್ತನಿಗಳ ಆಶ್ರಯದಾಣಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಹೆಡ್ ಮಾಸ್ತರರು ಸಂತೋಷಗೊಂಡುದು ಏಕೆ ?<br>***ಉತ್ತರ :***<br>ಹಳೆಯ ವಿದ್ಯಾರ್ಥಿಗಳು ತಮ್ಮ ಮನೆಗೆ ಬಂದಿದ್ದರಿಂದ ಹೆಡ್ ಮಾಸ್ತರರು ಸಂತೋಷಗೊಂಡರು. | |
| 9. | ಲಂಡನ್ ವಿಶ್ವವಿದ್ಯಾನಿಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಗಿದೆ ?<br>***ಉತ್ತರ :***<br>ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಗಾಂಧೀಜಿಯವರು ಓದಿದ್ದರಿಂದ ಅಲ್ಲಿ ಗಾಂಧೀಜಿಯವರ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. | |
| 10. | ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು ?<br>***ಉತ್ತರ :***<br>ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣಿಸುತ್ತಿದ್ದವು. | |
| 11. | ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ ?<br>***ಉತ್ತರ :***<br>ಯುಗಾದಿಯಲ್ಲಿ ಬೇವು, ಬೆಲ್ಲವನ್ನು ಹಂಚುವ ಸಂಪ್ರದಾಯವಿದೆ. | |
| 12. | ತಿಮಿರಕ್ಕೆ ವೈರಿ ಯಾವುದು ?<br>***ಉತ್ತರ :***<br>ತಿಮಿರಕ್ಕೆ ವೈರಿ ದೀಪ (ಬೆಳಕು). | |
| 13. | ಅಡಿಗರು ಹಗಲಿರುಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?<br>***ಉತ್ತರ :***<br>ಒಂದೇ ಹೆಗ್ಗುರಿಗೆ ಹಗಲಿರುಳು ಹೋರಾಡಬೇಕೆಂದು ಅಡಿಗರು ಹೇಳುತ್ತಾರೆ. | |
| 14. | ಕುಣಿಗಲ್ ಕೆರೆ ಹೇಗೆ ಬಾಗಿದೆ ?<br>***ಉತ್ತರ :***<br>ಕುಣಿಗಲ್ ಕೆರೆ ಬಾಳೆಹಣ್ಣಿನಂತೆ ಬಾಗಿದೆ. | |
| 15. | ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?<br>***ಉತ್ತರ :***<br>ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ. | |
| 16. | ಕೌರವನ ಸೇನೆ ಉತ್ತರನಿಗೆ ಹೇಗೆ ಕಾಣಿಸಿತು ?<br>***ಉತ್ತರ :***<br>ಕೌರವ ಸೇನೆಯು ಉತ್ತರನಿಗೆ ವಿಶಾಲವಾದ ಸಮುದ್ರದಂತೆ ಕಾಣಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| III. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) :** | **8 × 2 = 16** |
| 17. | ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?<br>***ಉತ್ತರ :***<br>"ದೇವರಾಜ, ವರವನ್ನು ಕೊಡುವ ಇಚ್ಛೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು! ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ" ಎಂದು ಗಿಳಿಯು ಇಂದ್ರನಲ್ಲಿ ವರ ಕೇಳಿತು. | |
| 18. | ರೈತರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?<br>***ಉತ್ತರ :***<br>ರೈತರು ನಿಸರ್ಗದ ಜೊತೆ ಸೆಣಸಬೇಕು. ಸಕಾಲಕ್ಕೆ ಮಳೆ ಬರುವುದಿಲ್ಲ. ಉತ್ತಮ ಬೀಜ ಸಿಗುವುದಿಲ್ಲ. ಭೂಮಿ ಬರಡಾಗುತ್ತಿದೆ. ಕ್ರಿಮಿ-ಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲುತ್ತಿವೆ. ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಇವು ರೈತರು ಎದುರಿಸುತ್ತಿರುವ ಸಮಸ್ಯೆಗಳಾಗಿವೆ. | |
| 19. | ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?<br>***ಉತ್ತರ :***<br>ಹಕ್ಕಿಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ. ಕಾವು, ಗುಟುಕು ಪಡೆದು ಜೀವಕಣ್ತೆರೆವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಅವಘಡಗಳನ್ನು ಎದುರಿಸಿ ಬದುಕುವ ಸಾಹಸಗಾಥೆ ಈ ಎಲ್ಲ ಬದುಕಿನ ಅನುಭವಗಳು ಹಕ್ಕಗೂಡಿನಲ್ಲಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 20. | ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು ? | |
| | ***ಉತ್ತರ :*** | |
| | "೧೬೬೬ ರಲ್ಲಿ ಲಂಡನ್‌ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ ૩ ದಿನ ಲಂಡನ್ ಹೊತ್ತಿ ಉರಿಯಿತಂತೆ. ೧೩,೦೦೦ ಮನೆಗಳು, ೮೦ ಚರ್ಚ್‌ಗಳು ಸುಟ್ಟುಹೋದವಂತೆ. ಇದರ ಸವಿನೆನಪಿಗಾಗಿ ೨೦೦ ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರಂತೆ. ಅದಕ್ಕಿಂತ ಒಂದೆರಡು ವರುಷದ ಹಿಂದೆ ಪ್ಲೇಗ್‌ಗೆ ಲಂಡನ್ನಿನಲ್ಲಿ ಹನ್ನೆರಡು-ಹದಿಮೂರು ಸಾವಿರ ಜನ ಸತ್ತು ಹೋದರಂತೆ" ಎಂದು ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದನು. | |
| 21. | ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ ? | |
| | ***ಉತ್ತರ :*** | |
| | ಚೈತ್ರದಲ್ಲಿ ಜಗದ ಎಲ್ಲಾ ಕಡೆ ಹೊಸಕಳೆ ತುಂಬಿರುತ್ತದೆ. ಜಗತ್ತಿನ ಜನರು, ಪ್ರಾಣಿ, ಪಕ್ಷಿಗಳು ಮೈಕೊಡವಿಕೊಂಡು ಲಗುಬಗೆಯಿಂದ ತಮ್ಮ ಕೆಲಸಕ್ಕೆ ಹೊರಟಂತೆ ಭಾಸವಾಗುತ್ತದೆ. ಪರಿಸರದಲ್ಲಿ ಹಾಗೂ ಜನರಲ್ಲಿ ಹೊಸ ಉಲ್ಲಾಸ ಕಂಡುಬರುತ್ತದೆ. ಹೀಗೆ ಎಲ್ಲೆಲ್ಲಿಯೂ ಸಂಭ್ರಮ ಕಂಡುಬರುವುದರಿಂದ ಚೈತ್ರದಲ್ಲಿ ನೆಲ ಮುಗಿಲ ವಾಲಗ ನಡೆದಂತೆ ಭಾಸವಾಗುತ್ತದೆ. | |
| 22. | 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' - ಈ ಮಾತಿನ ಅರ್ಥವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಅಕ್ಕಮಹಾದೇವಿಯವರ ವಚನದಲ್ಲಿ ಬರುವ 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ' ಈ ಮಾತು ವಿಶಿಷ್ಟ ಅರ್ಥವನ್ನು ಹೊಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮನುಷ್ಯನಿಗೆ ಬರಿ ರೂಪವಿದ್ದರೆ ಸಾಲದು, ಒಳ್ಳೆಯ ಗುಣವಿರಬೇಕು. ಒಳ್ಳೆಯ ಗುಣವಿದ್ದಾಗ ರೂಪಕ್ಕೂ ಬೆಲೆ. ಹಸು ಹಾಲು ಕೊಟ್ಟಂತೆ ಮನುಷ್ಯರಲ್ಲಿ ಒಳ್ಳೆಯ ಗುಣವಿರಬೇಕು ಎಂಬುದು ಈ ಮಾತಿನ ಅರ್ಥ ವೈಶಿಷ್ಟ್ಯ. | |
| 23. | 'ಕಳ್ಳರ ಗುರು' ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರಗಳೇನು ?<br>***ಉತ್ತರ :***<br>'ಕಳ್ಳರ ಗುರು' ಪಾಠದಿಂದ ನಾವು ಹಲವು ವಿಷಯಗಳನ್ನು ಕಲಿತುಕೊಳ್ಳಬಹುದು. ಇಲ್ಲಿ ಬರುವ ವೈದ್ಯರಂತೆ ನಮ್ಮ ಕೆಲಸಗಳನ್ನು ನಾವು ಪ್ರಾಮಾಣಿಕವಾಗಿ ಸೇವಾ ಮನೋಭಾವದಿಂದ ಮಾಡಬೇಕು. ಸೇವೆ ಮಾಡುವಾಗ ಹೆಚ್ಚಿನ ಪ್ರತಿಫಲ ಅಪೇಕ್ಷೆಯನ್ನು ಇಟ್ಟುಕೊಳ್ಳಬಾರದು. ಕಳ್ಳತನ ಮಾಡಬಾರದು, ಹಣ ಹೊನ್ನನ್ನು ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸಬಾರದು. ಸಾಧ್ಯವಿದ್ದಷ್ಟು ಮತ್ತೊಬ್ಬರಿಗೆ ಸಹಾಯ ಮಾಡಬೇಕು. ಕೃತಜ್ಞತಾ ಭಾವನೆ ಇರಬೇಕು. ಇವು ಕಳ್ಳರ ಗುರು ಪಾಠದಿಂದ ನಾವು ಕಳಿತುಕೊಳ್ಳಬೇಕಾದ ವಿಚಾರಗಳಾಗಿವೆ. | |
| 24. | ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ?<br>***ಉತ್ತರ :***<br>'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಬರುವ ಹೊಳೆಯ ಸಾಲಿನಲ್ಲಿ ಹಿಂದಿನ ಹಲವಾರು ನೆನಪುಗಳಿವೆ. ರಾಜ್ಯಗಳು ಹುಟ್ಟಿದ ಮತ್ತು ರಾಜ್ಯಗಳು ಉರುಳಿದ ನೆನಪುಗಳಿವೆ. ಶತ ಶತಮಾನಗಳಿಂದ ಸಾಗಿ ಬಂದ ನೇಗಿಲಯೋಗಿಯ ನೆನಪುಗಳಿವೆ. ಹೊಳೆಯ ದಂಡೆಯ ಸಾಲಿನಲ್ಲಿ ನಡೆದ ಸಂತೆ, ಜಾತ್ರೆಯ ನೆನಪುಗಳಿವೆ. ಗೊಬ್ಬರದ ಹಾಡು ಹೊಮ್ಮಿದ ನೆನಪುಗಳಿವೆ. ಇವು ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ನೆನಪುಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **IV.** | **ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | *ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು :*<br>***ಉತ್ತರ :***<br>ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ೧೯೫೧ ರಲ್ಲಿ ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹೆಡಿಯಾಲ ಗ್ರಾಮದಲ್ಲಿ ಜನಿಸಿದರು. ಇವರು 'ಜೀವನ ದರ್ಶನ', 'ಕೈದೀವಿಗೆ', 'ಹುಟ್ಟು ಸಾವುಗಳ ಮಧ್ಯೆ', 'ಸಮಾಧಿಯ ಮೇಲೆ', 'ಕಾಯಕ ದಾಸೋಹ', 'ಪ್ರಳಯ! ಮುಂದೇನು ?', 'ಸುಖ ಎಲ್ಲಿದೆ ?', 'ಅರಿವಿನ ಅಂತರಾಳ', 'ಬಸವ ಧರ್ಮ', 'ಅಂತರಂಗ ಬಹಿರಂಗ', 'ಸ್ವಾಮಿ ವಿವೇಕಾನಂದ', 'ಜಂಗಮದೆಡೆಗೆ', 'ಅಂಕುಶ', 'ಶಿವಾನುಭವ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರು 'ಗೌರವ ಡಾಕ್ಟರೇಟ್' ಮತ್ತು 'ಪಾಲ್ ಹ್ಯಾರಿಸ್' ಪ್ರಶಸ್ತಿಗಳಿಂದ ಪುರಸ್ಕೃತರು, ಇವರು 'ರಂಗ ಜಂಗಮ' ಎಂದು ಖ್ಯಾತರಾಗಿದ್ದಾರೆ. | |
| **V.** | **ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯುವುದು :** | **1 × 3 = 3** |
| | ಪಠ್ಯಾಂಶಕ್ಕೆ | 2 ಅಂಕಗಳು |
| | ಪದ ಬಳಕೆ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 26. | ನರನೊಳಗೆ ನಾರಾಯಣನ ರೂಪು ಕಂಡು,<br>ತಿರೆಯೊಳಗೆ ಸುರಪುರದ ಮೈಸಿರಿಯನುಂಡು<br>ಪರಹಿತಕೆ ಬಳಲುತಿರಲದುವೆ ಜೀವನವು;<br>ಪೆರತೇನನೆಸಗಿದರು ನಮಗೆ ಲಾಂಛನವು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಉತ್ತರ :*<br>ಈ ಪದ್ಯಭಾಗವನ್ನು ಕವಿ ಎಂ. ಗೋಪಾಲಕೃಷ್ಣ ಅಡಿಗ ಅವರ 'ಸಮಗ್ರಕಾವ್ಯ' ಕೃತಿಯ 'ಗುರಿ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಮಾನವನ ಬದುಕು ಹೇಗಿರಬೇಕೆಂಬುದನ್ನು ಕವಿ ಇಲ್ಲಿ ಹೇಳಿದ್ದಾರೆ. ಮನುಷ್ಯರಲ್ಲಿಯೇ ದೇವರನ್ನು ಕಾಣಬೇಕು. ಈ ಭೂಮಿಯಲ್ಲಿ ದೇವಲೋಕದಲ್ಲಿರಬಹುದಾದ ಸಿರಿ ಸುಖವನ್ನು ಅನುಭವಿಸಬೇಕು. ಪರರ ಹಿತಕ್ಕಾಗಿ ಶ್ರಮಿಸುವ ದಿಸೆಯಲ್ಲಿ ನಮ್ಮ ಬದುಕು ರೂಪಗೊಳ್ಳಬೇಕು. ಸಮಾಜದಿಂದ ಅನುಕೂಲಗಳನ್ನು ಪಡೆದ ನಾವು ಅದೇ ಸಮಾಜಕ್ಕೆ ಒಳಿತನ್ನು ಮಾಡದಿದ್ದರೆ ಅದು ನಮಗೆ ಶೋಭೆಯನ್ನು ತರದೆ ಕಪ್ಪುಚುಕ್ಕೆಯಾಗಿ ಉಳಿಯಬಹುದು. ಆದ್ದರಿಂದ ಸ್ವಾರ್ಥ ತ್ಯಜಿಸಿ ದೇಶ ಮತ್ತು ಸಮಾಜದ ಅಭಿವೃದ್ಧಿಗೆ ದುಡಿಯುತ್ತ ಬದುಕಬೇಕೆಂಬುದನ್ನು ಕವಿ ಇಲ್ಲಿ ಹೇಳಿದ್ದಾರೆ. | |
| **VI.** | **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** | **1 × 3 = 3** |
| | ಅಲಂಕಾರವನ್ನು ಹೆಸರಿಸುವುದು | 1 ಅಂಕ |
| | ಲಕ್ಷಣ ಮತ್ತು ಸಮನ್ವಯಗೊಳಿಸುವುದು | 2 ಅಂಕಗಳು |
| | ಒಟ್ಟು | 3 ಅಂಕಗಳು |
| 27. | "ಕುಣಿಗಲ್ ಕೆರೆ ನಿಂಬೆ ಹಣ್ಣಿನಂತೆ ತುಂಬಿದೆ"<br>*ಉತ್ತರ :*<br>*ಅಲಂಕಾರದ ಹೆಸರು :* ಉಪಮಾಲಂಕಾರ<br>*ಲಕ್ಷಣ :* ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.<br>*ಉಪಮೇಯ :* ಕುಣಿಗಲ್ ಕೆರೆ<br>*ಉಪಮಾನ :* ನಿಂಬೆಯ ಹಣ್ಣು<br>*ಉಪಮಾವಾಚಕ :* ಅಂತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ಸಮಾನಧರ್ಮ :* ಕುಣಿಗಲ್ ಕೆರೆ ಮತ್ತು ನಿಂಬೆಯ ಹಣ್ಣು ತುಂಬಿರುವುದು. | |
| | *ಸಮನ್ವಯ :* ಇಲ್ಲಿ 'ಕುಣಿಗಲ್ ಕೆರೆ' ಎಂಬ ಉಪಮೇಯವನ್ನು 'ನಿಂಬೆಯ ಹಣ್ಣು' ಎಂಬ ಉಪಮಾನಕ್ಕೆ 'ತುಂಬಿರುವುದು' ಎಂಬ ಸಮಾನ ಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ. | |
| **VII.** | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 28. | "ತುಂಬಿದ ಕೊಡ ತುಳುಕುವುದಿಲ್ಲ."<br>**ಅಥವಾ**<br>"ಮಾತು ಬೆಳ್ಳಿ, ಮೌನ ಬಂಗಾರ." | |
| **VIII.** | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | **5 × 3 = 15** |
| | ಕೃತಿ, ಕರ್ತೃ ಮತ್ತು ಪಠ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 29. | "ಅವನು ಬಂದರೆ ಕರೆದುಕೊಂಡು ಹೋಗು ತಾಯಿ."<br>***ಉತ್ತರ :***<br>ಈ ವಾಕ್ಯವನ್ನು ರಮೇಶಗೌಡ ಎಂ.ಕೆ. ಅವರು ಬರೆದಿರುವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | 'ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳು' ಎಂಬ ಜೀವನಚರಿತ್ರೆಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಪಂಚಾಕ್ಷರ ಗವಾಯಿಗಳು ಪುಟ್ಟರಾಜರ ತಾಯಿ ಸಿದ್ಧಮ್ಮನವರಿಗೆ ಹೇಳಿದರು. ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠ ಶಾಲೆಯ ಹೊಳೆ-ಆಲೂರಿನಲ್ಲಿ ಕ್ಯಾಂಪ್ ಹಾಕಿದ್ದಾಗ ಸಿದ್ಧಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜನನ್ನು ಕಾಣಲು ಬಂದರು. ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿಬಂದು ಮಗನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡ ಸಂದರ್ಭದಲ್ಲಿ ಗವಾಯಿಗಳು "ಅವನು ಬಂದರೆ ಕರೆದುಕೊಂಡು ಹೋಗು ತಾಯಿ."ಎಂದು ಹೇಳಿದರು. ಈ ಮಾತಿನಲ್ಲಿ ಗುರುಗಳಿಗೆ ಶಿಷ್ಯನ ಮೇಲಿದ್ದ ವಾತ್ಸಲ್ಯ, ಕಳಕಳಿ, ಬಾಂಧವ್ಯ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 30. | "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ." | |
| | ***ಉತ್ತರ :*** | |
| | ಈ ವಾಕ್ಯವನ್ನು ಡಾ. ಗುರುರಾಜ ಕರ್ಜಗಿಯವರು ಬರೆದ 'ಕರುಣಾಳು ಬಾ ಬೆಳಕೆ' ಪುಸ್ತಕದಿಂದ ಆಯ್ದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಗುರುಗಳು ವಿದ್ಯಾರ್ಥಿಗಳಿಗೆ ಹೇಳಿದರು. ತಮ್ಮ ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳೊಂದಿಗೆ ಕಾಫೀ ಕುಡಿಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳನ್ನು ಕುರಿತು ನೀವು ಬೆಲೆ ಬಾಳುವ ಕಪ್ಪನ್ನು ಆರಿಸಿಕೊಂಡಿರಿ. ಜೀವನ ಎಂದರೆ ಕಾಫೀ ಇದ್ದಂತೆ. ನಿಮಗೆಲ್ಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬೇಕಾಗಿದ್ದುದು. ಕಾಫೀ, ಕಪ್ಪಲ್ಲ. "ಭಗವಂತ ನಿಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಕಪ್ಪುಗಳ ಚಿಂತೆ ಬೇಡ, ಕಾಫೀ ಆಸ್ವಾದಿಸಿ" ಎಂದು ಹೇಳುತ್ತಾರೆ. ಈ ಮಾತಿನಲ್ಲಿ ಗುರುಗಳಿಗೆ ಶಿಷ್ಯರ ಮೇಲಿನ ಪ್ರೀತಿ, ಕಳಕಳಿಯಭಾವ, ಜೀವನ ಕುರಿತ ಮಾರ್ಗದರ್ಶನ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| 31. | "ಆ ಗೋಪಾಲ ಕೊಡಬೇಕು, ನಾವು ಉಣಬೇಕು" | |
| | ***ಉತ್ತರ :*** | |
| | ಈ ವಾಕ್ಯವನ್ನು ಕುವೆಂಪುರವರ ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆಯ್ದ 'ನನ್ನ ಗೋಪಾಲ' ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ಈ ಮಾತನ್ನು ಗೋಪಾಲನ ತಾಯಿ ಗೋಪಾಲನಿಗೆ ಹೇಳಿದಳು. ಗೋಪಾಲನು ಶಾಲೆಯಿಂದ ಬರುವಾಗ ಕಾಡು ದಾಟಿ ಸಂಜೆಯ ಹೊತ್ತಿನಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ. ಜೊತೆಗೆ ಯಾರಾದರೂ ಬೇಕು. ಗೆಳೆಯರ ಜೊತೆಗೆ ಆಳುಗಳಿರುವರಮ್ಮ ಎಂದು ಹೇಳಿದ ಸಂದರ್ಭದಲ್ಲಿ ತಾಯಿಯು ಅವರೆಲ್ಲಾ ಶ್ರೀಮಂತರ ಮಕ್ಕಳು, ಬೇಕಾದಷ್ಟು ಹಣವಿದೆ. ನಮಗೆ ಹೊಟ್ಟೆಗೆ ಹಿಟ್ಟು ಸಿಕ್ಕುವುದೇ ಕಷ್ಟ. ನೂಲು ಮಾರಿ ಬಂದ ಮೂರು ಕಾಸಿನಲ್ಲಿನಷ್ಟೆ ಸಂಸಾರ ಸಾಗಬೇಕು. "ಆ ಗೋಪಾಲ ಕೊಡಬೇಕು, ನಾವು ಉಣಬೇಕು" ಎನ್ನುತ್ತಾಳೆ. ಈ ಮಾತಿನಲ್ಲಿ ಬಡತನ, ದೇವರ ಮೇಲಿನ ನಂಬಿಕೆ, ಭಕ್ತಿ ಸ್ವಾರಸ್ಯಕರವಾಗಿ ಅಭಿವ್ಯಕ್ತಗೊಂಡಿದೆ. | |
| 32. | "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು." | |
| | ***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಈ ವಾಕ್ಯವನ್ನು ಸಿ.ಪಿ. ಕೃಷ್ಣಕುಮಾರ್ ಅವರು ರಚಿಸಿದ 'ಬೊಗಸೆ' ಕವನಸಂಕಲನದಿಂದ ಆಯ್ದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.<br><br>ಈ ಮಾತನ್ನು ಕವಿ, ಮಾನವನು ಬದುಕಿನಲ್ಲಿ ಹೇಗಿರಬೇಕೆಂಬುದನ್ನು ಕುರಿತು ಹೇಳಿದ್ದಾರೆ. ಮನುಷ್ಯ ಸುದ್ದುಗದ್ದಲ ಮಾಡದೆ ತನ್ನ ಪಾಲಿನ ಕರ್ತವ್ಯ ಮಾಡಬೇಕು ತಟ್ಟೆಯಲ್ಲಿ ಕರ್ಪೂರ ಮೌನದಲ್ಲಿ ಕರಗುವಂತೆ, ದೀಪದೆದುರಿಗೆ ಕತ್ತಲೆ ಸರಿಯುವಂತೆ "ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು." ಕೂಗಾಡಿ ಹಾರಾಡಿ ಫಲವಿಲ್ಲವೆಂದು ಹೇಳಿದ್ದಾರೆ. ಈ ಮಾತಿನಲ್ಲಿ ಮನುಷ್ಯ ಅಳವಡಿಸಿಕೊಳ್ಳಬೇಕಾದ ಜೀವನ ಮೌಲ್ಯಗಳು ಸ್ವಾರಸ್ಯಕರವಾಗಿ ಮೂಡಿ ಬಂದಿದೆ. | |
| 33. | "ಭಾವ ತಂದಾನೆ ಬಣ್ಣದ ಸೀರೆ."<br><br>***ಉತ್ತರ :***<br><br>ಈ ವಾಕ್ಯವನ್ನು ಜನಪದರು ರಚಿಸಿದ ಮತಿಘಟ್ಟ ಕೃಷ್ಣಮೂರ್ತಿಯವರು ಸಂಗ್ರಹಿಸಿರುವ 'ಕನ್ನಡ ಜನಪದ ಸಾಹಿತ್ಯ ಭಂಡಾರ' ಸಂಪುಟ-೧ ಪುಸ್ತಕದಿಂದ ಆಯ್ದ 'ಮೂಡಲ್ ಕುಣಿಗಲ್ ಕೆರೆ' ಎಂಬ ಜನಪದಗೀತೆಯಿಂದ ಆರಿಸಿಕೊಳ್ಳಲಾಗಿದೆ.<br><br>ಈ ಮಾತನ್ನು ಜನಪದರು, ಜನಪದ ಸಂಸ್ಕೃತಿ ಕುರಿತು ಹೇಳಿದ್ದಾರೆ. ಬಾಳೆಯ ಹಣ್ಣಿನಂತೆ ಬಾಗಿದೆ ಹಾಗೂ ನಿಂಬೆಯ ಹಣ್ಣಿನಂತೆ ತುಂಬಿದೆ ಕುಣಿಗಲ್ ಕೆರೆ. ತುಂಬಿದ ಕೆರೆಗೆ ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ, ಕುಪ್ಪಸ, ಸೀರೆ ಹಾಗೂ ಹಣ್ಣು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹಂಪಲುಗಳನ್ನು ಮೊರದಲ್ಲಿಟ್ಟು ನೀರಿಗೆ ಬಿಡಲಾಗುತ್ತದೆ. ಕೆರೆ ತುಂಬಿದ ಖುಷಿಗೆ ಭಾವನು ಬಣ್ಣದ ಸೀರೆಯನ್ನು ಬಾಗಿನ ಅರ್ಪಿಸಲು ತಂದಿರುವುದನ್ನು ಇಲ್ಲಿ ನೆನೆಯಲಾಗಿದೆ. ಈ ಮಾತಿನಲ್ಲಿ ಜನಪದ ಸಂಸ್ಕೃತಿ, ಸಂತಸ, ಎಲ್ಲರ ಪಾಲ್ಗೊಳ್ಳುವಿಕೆ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ. | |
| **IX.** | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>**(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ನಾಲ್ಕು ಅಂಕಗಳು)** | **1 × 4 = 4** |
| 34. | ಏಕಾಂಗಿ ವೀರನಂತೆ ..........................................<br>...............................................................<br>...............................................................<br>........................................... ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ................................................<br>...............................................................<br>...............................................................<br>................................ ಮಹಾಬೆಳಕೊಂದು ಕಂಡಿತು<br>***ಉತ್ತರ :***<br>ಏಕಾಂಗಿ ವೀರನಂತೆ ಮಧ್ಯರಾತ್ರಿ ಎದ್ದನು<br>ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು<br>ಅರಮನೆಯ ಮೋಹವನ್ನು ಹರಿದುಹಾಕಿ ಹೋದನು<br>ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು<br>**ಅಥವಾ**<br>ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು<br>ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು<br>ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಬೆಳಗಿತು<br>ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **X.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದ ಬಳಕೆಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 35. | ಅರ್ಜುನ ಮತ್ತು ಉತ್ತರ ಇವರ ಸಂಭಾಷಣೆಯ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>**ಅಥವಾ**<br>ಅರ್ಜುನ ಮತ್ತು ಉತ್ತರನ ಗುಣಸ್ವಭಾವಗಳ ವ್ಯತ್ಯಾಸಗಳನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.<br>***ಉತ್ತರ :***<br>ಕೌರವರು ವಿರಾಟರಾಜನ ಗೋವುಗಳನ್ನು ಅಪಹರಿಸುತ್ತಾರೆ. ಆಗ ವಿರಾಟರಾಜನ ಮಗ ಉತ್ತರನು ರಣರಂಗಕ್ಕೆ ಅರ್ಜುನನ ಸಾರಥ್ಯದಲ್ಲಿ ಬರುತ್ತಾನೆ. ಕೌರವ ಸೇನೆ ನೋಡಿ ಉತ್ತರನು ಹೆದರಿ ಸಮುದ್ರದಂತೆ ಈ ವಿಶಾಲವಾದ ಸೈನ್ಯದೊಡನೆ ಶಿವನಿಂದ ಮಾತ್ರ ಯುದ್ಧ ಮಾಡಲು ಸಾಧ್ಯ. ಬದುಕಿದ್ದರೆ ಜೀವನದಲ್ಲಿ ಏನನ್ನಾದರು ಕಾಣಲು ಸಾಧ್ಯವೆಂದು ಸೈನ್ಯಕ್ಕೆ ನಮಸ್ಕರಿಸಿ ತನ್ನ ಹೇಡಿತನ ಪ್ರದರ್ಶಿಸುತ್ತಾನೆ. ಆಗ ಅರ್ಜುನ ರಥವನ್ನು ಮುನ್ನಡಿಸಿದಾಗ ಉತ್ತರ ರಥದಿಂದ ಹಾರಿ ಓಡುತ್ತಿರುವುದನ್ನು ಕಂಡು ಅರ್ಜುನನು ನಗುತ್ತಾನೆ.<br>ಅರ್ಜುನನು ಉತ್ತರನಿಗೆ ಗದರಿ, ಅರಮನೆಯ ಹೆಂಗಳೆಯರ ಮುಂದೆ ಜಂಭಕೊಚ್ಚಿಕೊಳ್ಳುತ್ತಿದ್ದೆ. ಯುದ್ಧ ಭೂಮಿಯಲ್ಲಿ ವೈರಿ ಸೈನ್ಯವನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅರಿಯದೆ ನಾಡನರಿಯಂತೆ ವರ್ತಿಸಿದರೆ, ಹಲ್ಲುಗಿಂಜಿದರೆ ಬಿಡುವುದಿಲ್ಲ. ಯುದ್ಧ ಮಾಡು ನಡೆ ಎನ್ನುತ್ತಾನೆ. ಆಗ ಉತ್ತರ ಯುದ್ಧ ಭೂಮಿಯಿಂದ ಓಡಿದ ಪಾಪವನ್ನು ಅಶ್ವಮೇಧಯಾಗ ಮಾಡಿ ಕಳೆದುಕೊಳ್ಳಬಹುದು. ದೇವತಾ ಸ್ತ್ರೀಯರು ಬೇಡ, ನಮ್ಮ ಅರಮನೆಯ ನಾರಿಯರೆ ಸಾಕು. ಇಂದ್ರ ಪದವಿ ಬೇಡ, ನಮ್ಮ ಅರಸುತನ ಸಾಕು ಬಿಟ್ಟು ಕಳಿಸು ಎಂದ ಅಂಗಲಾಚಿದನು ಇವರಿಬ್ಬರ ನಡುವಿನ ಸಂಭಾಷಣೆ ಸ್ವಾರಸ್ಯಕರವಾಗಿ ಮೂಡಿಬಂದಿದೆ. | |
| | **ಅಥವಾ** | |
| | ಅರ್ಜುನ ಮತ್ತು ಉತ್ತರನ ಗುಣಸ್ವಭಾವಗಳಲ್ಲಿ ಹಲವು ವ್ಯತ್ಯಾಸಗಳು ಕಂಡುಬರುತ್ತವೆ. ಅರ್ಜುನ ಶೌರ್ಯ ಸಾಹಸಕ್ಕೆ ಹೆಸರಾದವನು. ಈತ ಧೈರ್ಯಶಾಲಿಯಾಗಿದ್ದು ಮತ್ತೊಬ್ಬರಿಗೆ ಧೈರ್ಯ ತುಂಬುತ್ತಾನೆ. ರಣರಂಗದಲ್ಲಿ ವೈರಿ ಸೈನ್ಯದ ಎದುರು ಅಂಜದೆ ಅಳುಕದೆ ಮುನ್ನಡೆಯುವ ಸ್ವಭಾವ, ತನ್ನ ಸಾಮರ್ಥ್ಯದ ಬಗ್ಗೆ ಹೇಳಿಕೊಳ್ಳದೇ ಮಾಡಿ ತೋರಿಸುವ ಸ್ವಭಾವ, ವೈರಿ ಸೈನ್ಯಕ್ಕೆ ಅರ್ಜುನನ್ನು ಕಂಡರೆ ಭಯ. ಈ ಎಲ್ಲಾ ಕಾರಣಗಳಿಗಾಗಿ ಅರ್ಜುನನ ಸ್ವಭಾವ ಮೆಚ್ಚುಗೆಯಾಗುತ್ತದೆ. | |
| | ಉತ್ತರನ ಸ್ವಭಾವ ಅರ್ಜುನನಿಗೆ ವಿರುದ್ಧವಾಗಿದೆ. ಈತ ಹೇಡಿಯಾಗಿದ್ದು, ಪುಕ್ಕಲು ಸ್ವಭಾವದವನು. ಅರಮನೆಯ ಹೆಂಗಳೆಯರ ಮುಂದೆ ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಜಂಭಕೊಚ್ಚಿಕೊಳ್ಳುತ್ತಾನೆ. ಆದರೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಯುದ್ಧ ಭೂಮಿಯಲ್ಲಿ ವೈರಿ ಸೈನ್ಯವನ್ನು ನೋಡಿ ಹೆದರಿ ಓಡುತ್ತಾನೆ. ಇದರಿಂದ ನಗೆಪಾಟಲಿಗೆ ಒಳಗಾಗುತ್ತಾನೆ. ಶೌರ್ಯವಿಲ್ಲದೆ ಬಡಾಯಿ ಕೊಚ್ಚಿಕೊಳ್ಳುವವರನ್ನು 'ಉತ್ತರನ ಪೌರುಷ ಒಲೆ ಮುಂದೆ' ಎಂಬ ಮಾತು ಪ್ರಚಲಿತದಲ್ಲಿದೆ. ಅರ್ಜುನ ಮತ್ತು ಉತ್ತರನ ಗುಣಸ್ವಭಾವಗಳನ್ನು ಗಮನಿಸಿದಾಗ ಶೌರ್ಯದ ಕಾರಣಕ್ಕೆ ಅರ್ಜುನನ ಸ್ವಭಾವ ಇಷ್ಟವಾಗುತ್ತದೆ. ಉತ್ತರ ಹೇಡಿತನದ ಕಾರಣಕ್ಕೆ ಮೆಚ್ಚುಗೆಯಾಗುವುದಿಲ್ಲ. ಇಲ್ಲಿ ಇವರಿಬ್ಬರ ಗುಣ ಸ್ವಭಾವಗಳಲ್ಲಿನ ವ್ಯತ್ಯಾಸಗಳು ಸ್ವಾರಸ್ಯಕರವಾಗಿ ಮೂಡಿಬಂದಿವೆ. | |
| **XI.** | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** **(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | **1 × 4 = 4** **( 2 + 2 )** |
| 36. | ಮನುಷ್ಯನಾಗಿ ಹುಟ್ಟಿದ ಮೇಲೆ ಕಾಯಿಲೆ ಕಸಾಲೆ ತಪ್ಪಿದ್ದಲ್ಲ. ಜ್ವರ, ಕೆಮ್ಮು, ಅಜೀರ್ಣ, ಭೇದಿ, ತಲೆನೋವು, ಕ್ಷಯ, ಅಸ್ತಮಾ, ಸಕ್ಕರೆ ಕಾಯಿಲೆ, ಅಧಿಕ ರಕ್ತ ಒತ್ತಡ, ಚರ್ಮರೋಗಗಳು, ಹೃದಯ ಬೇನೆ, ನ್ಯುಮೇನಿಯಾ, ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳಿಗೆ ಮನುಷ್ಯ ತುತ್ತಾಗುತ್ತಾನೆ.<br><br>ಕಾಯಿಲೆ ಬಂದಾಗ ನಾವು ವೈದ್ಯರಲ್ಲಿಗೆ ಹೋಗುತ್ತೇವೆ. ಕಾಯಿಲೆಗಳ ಲಕ್ಷಣ ತಿಳಿದು ನಮಗೆ ಬಂದಿರುವ ಕಾಯಿಲೆ ಯಾವುದೆಂದು ನಿರ್ಧಾರ ಮಾಡಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ವೈದ್ಯರು ಮಾಡುತ್ತಾರೆ. ಆಗ ಕಾಯಿಲೆ ವಾಸಿಯಾಗುತ್ತದೆ. ಇಲ್ಲವೇ ಹತೋಟಿಗೆ ಬರುತ್ತದೆ. ಆದರೆ ಇದು ಎಷ್ಟೋ ಬಾರಿ ನಿಧಾನವಾಗುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆಗ ರೋಗಿಗಳು "ವೈದ್ಯರು ಮುತುವರ್ಜಿಯಿಂದ ನೋಡಲಿಲ್ಲ, ಸರಿಯಾದ ಚಿಕಿತ್ಸೆ ನೀಡಲಿಲ್ಲ" ಎಂದು ದೂರುತ್ತಾರೆ. ವೈದ್ಯರು "ನಾನೇನು ಮಾಡಲಿ ? ಅವರು ನನ್ನೊಂದಿಗೆ ಸಹಕರಿಸಲಿಲ್ಲ. ನಾನು ಹೇಳಿದ ಹಾಗೆ ನಡೆದುಕೊಳ್ಳಲಿಲ್ಲ" ಎಂದು ರೋಗಿಗಳನ್ನು ದೂರುತ್ತಾರೆ. ಇದನ್ನು ತಪ್ಪಿಸಲು ಖಂಡಿತ ಸಾಧ್ಯವಿದೆ. ವೈದ್ಯರು ಹೇಳುವ ನಿಯಮ ಪಾಲಿಸಿದರೆ ಇರುವ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ರೂಪಿಸಲು ಸಾಧ್ಯವಾಗುತ್ತದೆ. ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ.<br>ಪ್ರಶ್ನೆಗಳು :<br>ಅ) ರೋಗಿ ಮತ್ತು ವೈದ್ಯರ ಪರಸ್ಪರ ದೂರುಗಳಾವುವು ?<br>ಆ) ಮನುಷ್ಯ ತುತ್ತಾಗುವ ಕಾಯಿಲೆಗಳಾವುವು ?<br>**ಉತ್ತರ :**<br>ಅ) ರೋಗಿಗಳು, ವೈದ್ಯರನ್ನು ಕುರಿತು "ವೈದ್ಯರು ಮುತುವರ್ಜಿಯಿಂದ ನೋಡಲಿಲ್ಲ, ಸರಿಯಾದ ಚಿಕಿತ್ಸೆ ನೀಡಲಿಲ್ಲ" ಎಂದು ದೂರುತ್ತಾರೆ. ವೈದ್ಯರು, ರೋಗಿಗಳನ್ನು ಕುರಿತು "ನಾನೇನು ಮಾಡಲಿ ? ಅವರು ನನ್ನೊಂದಿಗೆ ಸಹಕರಿಸಲಿಲ್ಲ. ನಾನು ಹೇಳಿದ ಹಾಗೆ ನಡೆದುಕೊಳ್ಳಲಿಲ್ಲ" ಎಂದು ದೂರುತ್ತಾರೆ. ಹೀಗೆ ರೋಗಿಗಳು ಮತ್ತು ವೈದ್ಯರು ಪರಸ್ಪರ ದೂರುತ್ತಾರೆ.<br>ಆ) ಮನುಷ್ಯನಾಗಿ ಹುಟ್ಟಿದ ಮೇಲೆ ಕಾಯಿಲೆ ಕಸಾಲೆ ತಪ್ಪಿದ್ದಲ್ಲ. ಜ್ವರ, ಕೆಮ್ಮು, ಅಜೀರ್ಣ, ಭೇದಿ, ತಲೆನೋವು, ಕ್ಷಯ, ಅಸ್ತಮಾ, ಸಕ್ಕರೆ ಕಾಯಿಲೆ, ಅಧಿಕ ರಕ್ತ ಒತ್ತಡ, ಚರ್ಮರೋಗಗಳು, ಹೃದಯ ಬೇನೆ, ನ್ಯುಮೋನಿಯಾ, ಕ್ಯಾನ್ಸರ್ ಇತ್ಯಾದಿ ಕಾಯಿಲೆಗಳಿಗೆ ಮನುಷ್ಯ ತುತ್ತಾಗುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XII.** | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 4 = 4** |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಗ್ರಂಥಾಲಯಗಳ ಮಹತ್ವ.<br>**ಅಥವಾ**<br>ಅರಣ್ಯ ಸಂರಕ್ಷಣೆಯ ಇಂದಿನ ಅಗತ್ಯತೆ. | |
| **XIII.** | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 5 = 5** |
| 38. | ನಿಮ್ಮನ್ನು ಬೆಳಗಾವಿ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ 'ಗೀತಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ, ಮಹಾನಗರ ಪಾಲಿಕೆಯ ಆಯುಕ್ತರಿಗೊಂದು ಮನವಿ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಕೋಲಾರದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ರಮೇಶ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ' ಕಾರ್ಯಕ್ರಮದ ವಿವರಗಳನ್ನು ತಿಳಿಸಿ, ಬಳ್ಳಾರಿ ವಿದ್ಯಾನಗರ ಬಡಾವಣೆಯ ನಿವಾಸಿಯಾದ 'ಕಮಲಾಕರ' ಎಂಬ ಗೆಳೆಯನಿಗೆ ಪತ್ರವನ್ನು ಬರೆಯಿರಿ.<br>***ಉತ್ತರ :***<br>ವ್ಯಾವಹಾರಿಕ ಪತ್ರ *:* | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | *ವೈಯಕ್ತಿಕ ಪತ್ರ :* | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ವಿನ್ಯಾಸ, ಪದಬಳಕೆ, ಶೈಲಿ | 1 ಅಂಕ |
| | ಒಟ್ಟು | 5 ಅಂಕಗಳು |